# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
## ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗ ಕಛೇರಿ.

ಮಾಹಿತಿಹಕ್ಕು ಕಾಯ್ದೆ 2005 ರ ಸೆಕ್ಷನ್ 4(1) ಎ ಮತ್ತು 4(1)ಬಿ ರಂತೆ ಪ್ರಕಟಿಸಲಾಗಿದೆ. ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು,

**1.** ಅ) **ಕಛೇರಿಯ ಹೆಸರು :-**ಕಾರ್ಯಪಾಲಕ ಅಭಿಯಂತರರ ಕಛೇರಿ ಪೂರ್ವ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

**ಆ) ರಚನೆ :-**

| |
|---|
| **ಕಾರ್ಯಪಾಲಕ ಅಭಿಯಂತರರು.** |
| **ಲೆಕ್ಕಾಧೀಕ್ಷಕರು** |

**ಉಪವಿಭಾಗಗಳು.** | **ವ್ಯವಸ್ಥಾಪಕರು**

**ಉಪ ವಿಭಾಗ ಸಂ-1, ಉಪ ವಿಭಾಗ ಸಂ-2, ಉಪ ವಿಭಾಗ ಸಂ-3, ಉಪ ವಿಭಾಗ ಸಂ-4,**

**ಇ) ಕಾರ್ಯಪಾಲಕ ಅಭಿಯಂತರ ಕಛೇರಿಯಲ್ಲಿ ನಿರ್ವಹಿಸಲಾಗುವ ಮುಖ್ಯ ಕೆಲಸ ಕಾರ್ಯಗಳು:-**

**1)** ಪೂರ್ವ ವಿಭಾಗದ ಅಡಿಯಲ್ಲಿ ಬರುವ ಬಿಡಿಎ ಬಡಾವಣೆಗಳಲ್ಲಿಯ ಖಾಲಿ ಇರುವ ನಿವೇಶನಗಳನ್ನು (ಮಧ್ಯದ ಹಾಗೂ ಮೂಲೆಯ) ಹರಾಜು ಹಾಕಿ ಹಂಚಿಕೆ ಮಾಡಲು ಕೇಂದ್ರ ಕಛೇರಿಗೆ ಮಾಹಿತಿ ಒದಗಿಸುವುದು. ಹರಾಜು ಪ್ರಕ್ರಿಯೆ ಮಾಡಿ ಮೇಲಾಧಿಕಾರಿಗಳಿಗೆ ಹರಾಜು ಮಾಡಲು ಸಹಾಯ ಮಾಡುವುದು.

2) ಪ್ರಾಧಿಕಾರದ ಪೂರ್ವ ವಿಭಾಗದ ಅಡಿ ಬರುವ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ರಸ್ತೆ ಅಭಿವೃದ್ಧಿ, ಶಾಲಾ ಕಟ್ಟಡ ನಿರ್ಮಾಣ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ ಇನ್ನಿತರೆ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಉಪವಿಭಾಗಾಧಿಕಾರಿಗಳಿಂದ ನಿರ್ವಹಿಸುವುದು.

3) ಪೂರ್ವ ವಿಭಾಗದ ಅಡಿಯಲ್ಲಿ ಬರುವ ಹೆಚ್.ಎಸ್.ಆರ್. ಬಡಾವಣೆಯ ನಿವೇಶನಗಳ ಖಚಿತ ಅಳತೆ ವರದಿ ನೀಡುವುದು, ಆ ನಂತರ ಬಡಾವಣೆ ರಚಿಸುವುದು, ನಿವೇಶನಗಳ ಗಡಿಕಲ್ಲುಗಳನ್ನು ಹಾಗೂ ನಿವೇಶನಗಳ ಸಂಖ್ಯೆ ಇರುವ ಕಲ್ಲು ನೆಟ್ಟು ಹಂಚಿಕೆದಾರರಿಗೆ ನಿವೇಶನವನ್ನು ಹಂಚಿಕೆ ಮಾಡಲು ಉಪಕಾರ್ಯದರ್ಶಿ-3 ರವರಿಗೆ ಕಛೇರಿ ಸಿಬ್ಬಂದಿ ರವರುಗಳಿಂದ ಕಾರ್ಯನಿರ್ವಹಿಸುವುದು.

4) ಪೂರ್ವ ವಿಭಾಗದ ಅಡಿ ಇರುವ ಪ್ರಾಧಿಕಾರದ ವಾಣಿಜ್ಯ ಮಳಿಗೆಗಳ ಉಸ್ತುವಾರಿ, ಎಲ್ಲಾ ಅಂಗಡಿ ಮಳಿಗೆಗಳ ಲೈಸೆನ್ಸ್ ಕರಾರು ಉಲ್ಲಂಘನೆ, ವಿರುದ್ದ ಕ್ರಮ ಕೈಗೊಳ್ಳುವುದು, ಈ ಕುರಿತು ಸಂಬಂಧಿಸಿದ ಎಲ್ಲಾ ಕಡತಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.

........2

5) ಪ್ರಾಧಿಕಾರದ ಪೂರ್ವ ವಿಭಾಗದಲ್ಲಿ ಇರುವ ಆಸ್ತಿ ವಹಿಯನ್ನು ಸಿಬ್ಬಂದಿಯವರಿಂದ ನಿರ್ವಹಿಸಲು ಆದೇಶ ನೀಡುವುದು, ಇದರ ಪ್ರತಿಯನ್ನು ಎಸ್ಟೇಟ್ ಅಧಿಕಾರಿಗಳಿಗೆ ಸಲ್ಲಿಸುವುದು.

6) ವಿಭಾಗದ ಅಡಿಯಲ್ಲಿ ಇರುವ ಪ್ರಾಧಿಕಾರದಿಂದ ಅನುಮೋದನೆಯಾಗಿ ಬಿ.ಬಿ.ಎಂ.ಪಿ.ಗೆ ಹಸ್ತಾಂತರ ಆಗದೇ ಇದ್ದ ವಸತಿ ಬಡಾವಣೆಗಳಲ್ಲಿಯ 185 ಚ.ಮೀ ಕ್ಕಿಂತ ಹೆಚ್ಚಿಗೆ ಹಾಗೂ 370 ಚ.ಮೀ. ವಿಸ್ತೀರ್ಣದ ವರೆಗಿನ ನಿವೇಶನಗಳಲ್ಲಿ ವಸತಿ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ನೀಡುವುದು.

7) ವಿಭಾಗದ ಅಡಿ ಬರುವ ಬಹುವಸತಿ ಕಟ್ಟಡಗಳ ನಕ್ಷೆ ಮಂಜೂರಾತಿಗಾಗಿ, ಖಾಸಗಿ ವಸತಿ ಬಡಾವಣೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಗಳಿಗೆ ಸ್ಥಳ ತನಿಖೆ ಮಾಡಿ ಮೇಲಾಧಿಕಾರಿಗಳಿಗೆ ವರದಿ ನೀಡುವುದು, ಇಂತಹ ಪ್ರಕರಣಗಳಲ್ಲಿ ಪ್ರಾಧಿಕಾರಕ್ಕೆ ಅರ್ಜಿದಾರರು ನೀಡಬೇಕಾದ ಉದ್ಯಾನವನ, ಮೂಲಭೂತ ಸೌಲಭ್ಯ ನಿವೇಶನಗಳನ್ನು ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳುವುದು, ಇದರ ಪ್ರತಿಯನ್ನು ಪ್ರಾಧಿಕಾರದ ನಗರ ಯೋಜನಾ ಸದಸ್ಯರ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು.

***II) ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಿಗಳು ಮತ್ತು ಕರ್ತವ್ಯಗಳು :-***

8) ಕಾರ್ಯಪಾಲಕ ಅಭಿಯಂತರರು :-

ಪೂರ್ವ ವಿಭಾಗದ ಅಡಿಯಲ್ಲಿ ಬರುವ ಎಲ್ಲಾ ಕಡತಗಳನ್ನು ಪರಿಶೀಲಿಸಿ ಪ್ರಾಧಿಕಾರದ ನಿಯಮಾವಳಿಗಳಂತೆ ಕರ್ತವ್ಯ ಪಾಲಿಸುವುದು.

9) ಎಂ.ಜಿ.ಶ್ರೀನಿವಾಸಮೂರ್ತಿ :- ವಿಭಾಗ ಕಛೇರಿ, ಆಯವ್ಯಯ ತಯಾರಿಸುವುದು. ಕಾಮಗಾರಿ ಬಿಲ್ಲುಗಳನ್ನು ಪಾವತಿಸಲು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಇನ್ನಿತರೆ ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ ಕಾಮಾರಿಗಳನ್ನು ನಿರ್ವಹಿಸುವುದು.

10) ಎಂ.ದೀನಪಾವನ :- ವಿಭಾಗ ಕಛೇರಿಗೆ ಬರುವ ಎಲ್ಲಾ ಕಡತ, ಪತ್ರಗಳು ಇತರೆ ಅರ್ಜಿಗಳನ್ನು ಸ್ವೀಕರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಿ ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡುವುದು.

11) ಪ್ರಥಮ ದರ್ಜೆ ಸಹಾಯಕರು (ವ್ಯವಸ್ಥಾಪಕರು) :-

ವಿಭಾಗ ಹಾಗೂ ಉಪ ವಿಭಾಗ ಕಛೇರಿಗೆ ಕಡತಗಳನ್ನು ಪತ್ರಗಳನ್ನು ರವಾನೆ ಮಾಡುವುದು.

***12) ಉಪ ವಿಭಾಗ ಸಂಖ್ಯೆ-1***

*ಇಂ. ಬಿ.ಬಿ.ಭೋರಿ, ಸಹಾಯಕ ಕಾರ್ಯಪಾಲಕ ಇಂಜನಿಯರ್ :- ಉಪ ವಿಭಾಗ ಸಂಖ್ಯೆ-1 ಈ ಉಪ ವಿಭಾಗದ ಅಡಿಯಲ್ಲಿ ಇರುವ ಬಿ.ಡಿ.ಎ. ಬಡಾವಣೆಗಳಲ್ಲಿ ಖಾಲಿ ಮಧ್ಯಂತರ ಹಾಗೂ ಮೂಲೆ ನಿವೇಶನಗಳನ್ನು ಹರಾಜು ಮೂಲಕ ಹಂಚಿಕೆ ಮಾಡಲು ಕೇಂದ್ರ ಕಛೇರಿಗೆ ಮಾಹಿತಿ ಒದಗಿಸುವುದು, ಹೆಚ್.ಎ.ಎಲ್. 2ನೇ ಮತ್ತು 3ನೇ ಹಂತ, ಭಿನ್ನಮಂಗಲ, ದೊಮ್ಮಲೂರು 1ನೇ & 2ನೇ ಹಂತ ಹಾಗೂ ಖಾಸಗಿ ವಸತಿ ಬಡಾವಣೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸದೇ ಇರುವ ಬಡಾವಣೆಗಳ ನಕ್ಷೆ ಮಂಜೂರಾತಿಯನ್ನು ನೀಡಲಾಗುವುದು.*

*ಎ) ವೀರಭದ್ರಯ್ಯ .ಸಿ., ಸಹಾಯಕ ಇಂಜನಿಯರ್ ;- ಬಿ.ಡಿ.ಎ ಬಡಾವಣೆಗಳಾದ ಹೆಚ್.ಎ.ಎಲ್. 2ನೇ ಮತ್ತು 3ನೇ ಹಂತ, ಇಂದಿರಾನಗರ, ಭಿನ್ನಮಂಗಲ, ಕನ್ನಮಂಗಲ, ತಿಪ್ಪಸಂದ್ರ, ಬಿ.ಎಂ.ಕಾವಲ್ ಖಾಲಿ ನಿವೇಶನಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಕೇಂದ್ರ ಕಛೇರಿಗೆ ವಿವರಗಳನ್ನು ಒದಗಿಸುವುದು, ಆಸ್ಟಿನ್ ಟೌನ್, ದೊಮ್ಮಲೂರು, ಇಂದಿರಾನಗರ ಬಿ.ಡಿ.ಎ ವಾಣಿಜ್ಯ ಮಳಿಗೆ ಉಸ್ತುವಾರಿ ಕೆಲಸ.*

*........3*

***13) ಉಪ ವಿಭಾಗ ಸಂಖ್ಯೆ–02,***

***ಇಂ. ಸಿ.ಜೆ. ರಘುನಂದನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ – 02,*** *ಈ ಉಪ ವಿಭಾಗದ ಅಡಿಯಲ್ಲಿ ಇರುವ ಬಿ.ಡಿ.ಎ. ಬಡಾವಣೆಗಳಲ್ಲಿರುವ ಖಾಲಿ ಮಧ್ಯಂತರ ಹಾಗೂ ಮೂಲೆ ನಿವೇಶನಗಳನ್ನು ಹರಾಜು ಮೂಲಕ ಹಂಚಿಕೆ ಮಾಡಲು ಕೇಂದ್ರ ಕಛೇರಿಗೆ ಮಾಹಿತಿ ಒದಗಿಸುವುದು, ಹೆಚ್.ಎಸ್.ಆರ್–1,2,4, ಕೋರಮಂಗಲ, ಅಗರ, ಹರಳುಕುಂಟೆ, ಅಮರ್ ಜ್ಯೋತಿ ಲೇಔಟ್, ದೊಮ್ಮಲೂರು, ಅಕ್ಕಿತಿಮ್ಮನಹಳ್ಳಿ, ವಿವೇಕನಗರ, ಸೊನ್ನೇನಹಳ್ಳಿ, ಸಿಂಗಸಂದ್ರ, ಐಟಿಐ ಲೇಔಟ್, ಮಂಜೂರಾತಿ ನೀಡುವುದು ಹಾಗೂ ಖಾಸಗಿ ವಸತಿ ಬಡಾವಣೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸದೇ ಇರುವ ಬಡಾವಣೆಗಳ ನಕ್ಷೆ ಮಂಜೂರಾತಿಯನ್ನು ನೀಡಲಾಗುವುದು.*

***ಎ) ಎಸ್.ಎಸ್.ಅರವಿಂದ್, ಸಹಾಯಕ ಇಂಜಿನಿಯರ್*** *:– ಹೆಚ್.ಎಸ್.ಆರ್. ಸೆಕ್ಟರ್–1, 2, 4, ಸ್ಥಳ ಪರಿವೀಕ್ಷಣೆ ಮಾಡಿ ಮೇಲಾಧೀಕಾರಿಗಳಿಗೆ ಮಂಡಿಸುವುದು. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ ಪ್ರಾಧಿಕಾರದ ಸ್ವತ್ತು ಕಾಪಾಡುವುದು, ಮಹದೇವಪುರ ವಲಯಕ್ಕೆ ಸಂಬಂಧಿಸಿದ ಖಾಸಗಿ ಬಡಾವಣೆ, ಅಮರ್ ಜ್ಯೋತಿ ಲೇಔಟ್, ಸೊನ್ನೇನಹಳ್ಳಿ, ಲಕ್ಕಸಂದ್ರ, ವಿಲ್ಸನ್ ಗಾರ್ಡನ್, ಅಕ್ಕಿತಿಮ್ಮನಹಳ್ಳಿ, ವಿವೇಕನಗರ ಇರುವ ಮಧ್ಯಂತರ ಹಾಗೂ ಮೂಲೆ ನಿವೇಶನಗಳ ಹರಾಜು ಪ್ರಕ್ರಿಯೆಗೆ ಅಳತೆ, ವಿಸ್ತೀರ್ಣ ಇತ್ಯಾದಿ ಒದಗಿಸುವುದು.*

***14) ಉಪ ವಿಭಾಗ ಸಂಖ್ಯೆ–03,***

***ಇಂ. ಜಿ.ಸತೀಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ–03,*** *ಅಡಿಯಲ್ಲಿ ಇರುವ ಹೆಚ್.ಎಸ್.ಆರ್. ಸೆಕ್ಟರ್–3, 5, 6, 7, ಎ.ಇ.ಸಿ.ಎಸ್. ಲೇಔಟ್ 'ಏ' ಮತ್ತು 'ಬಿ' ಬ್ಲಾಕ್ ಹಾಗೂ ಇದರಲ್ಲಿರುವ ಖಾಸಗಿ ಬಡಾವಣೆಗಳ ನಿವೇಶನಗಳ ಕುರಿತು ಕೇಂದ್ರ ಕಛೇರಿಗೆ ಮಾಹಿತಿ ಒದಗಿಸುವುದು ಉಪ ವಿಭಾಗದಡಿಯಲ್ಲಿ ಬಿ.ಡಿ.ಎ.ಸ್ವತ್ತಿನಲ್ಲಿ ಇರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವುದು ಹಾಗೂ ಖಾಸಗಿ ವಸತಿ ಬಡಾವಣೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸದೇ ಇರುವ ಬಡಾವಣೆಗಳ ನಕ್ಷೆ ಮಂಜೂರಾತಿಯನ್ನು ನೀಡಲಾಗುವುದು.*

***ಎ) ಡಿ.ಕೃಷ್ಣಾನಾಯಕ್, ಸಹಾಯಕ ಇಂಜಿನಿಯರ್:–*** *ಹೆಚ್.ಎಸ್.ಆರ್. ಸೆಕ್ಟರ್–3, 5, 6, 7, ಸರ್ಜಾಪುರ ರಸ್ತೆಯಿಂದ ಮಾರತ್‌ಹಳ್ಳಿ ಮಧ್ಯದಲ್ಲಿ ಬರುವ ಖಾಸಗಿ ಬಡಾವಣೆಗಳ ಸಿ.ಎ.ನಿವೇಶನಗಳ ಹಂಚಿಕೆ, ಉಸ್ತುವಾರಿ ಹೊಸ ಬಡಾವಣೆ ಪಾರ್ಕ್ ಹಾಗೂ ಸಿ.ಎ. ನಿವೇಶನಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ವಿವರಗಳನ್ನು ಒದಗಿಸುವುದು, ಎ.ಇ.ಸಿ.ಎಸ್. ಲೇಔಟ್ 'ಬಿ' ಬ್ಲಾಕ್ ಹಾಗೂ ಹೆಚ್.ಎಸ್.ಆರ್. ಬಿಡಿಎ ವಾಣಿಜ್ಯ ಸಂಕೀರ್ಣದ ಮೇಲುಸ್ತುವಾರಿ ಇತ್ಯಾದಿ.*

***15) ಉಪ ವಿಭಾಗ ಸಂಖ್ಯೆ–04,***

***ಇಂ. ಮೊಹಮ್ಮದ್ ನೇಮತ್ ಉಲ್ಲಾಖಾನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ–03,*** *ಅಡಿಯಲ್ಲಿ ಇರುವ ಖಾಸಗಿ ಬಡಾವಣೆಗಳ ನಿವೇಶನಗಳ ಕುರಿತು ಕೇಂದ್ರ ಕಛೇರಿಗೆ ಮಾಹಿತಿ ಒದಗಿಸುವುದು ಉಪ ವಿಭಾಗದಡಿಯಲ್ಲಿ ಬಿ.ಡಿ.ಎ.ಸ್ವತ್ತಿನಲ್ಲಿ ಇರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವುದು ಹಾಗೂ ಖಾಸಗಿ ವಸತಿ ಬಡಾವಣೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸದೇ ಇರುವ ಬಡಾವಣೆಗಳ ನಕ್ಷೆ ಮಂಜೂರಾತಿಯನ್ನು ನೀಡಲಾಗುವುದು.*

ಎ) ಮಲ್ಲಿಕಾರ್ಜುನ .ಬಿ., ಸಹಾಯಕ ಇಂಜಿನಿಯರ್:- ಖಾಸಗಿ ಬಡಾವಣೆಗಳ ಸಿ.ಎ.ನಿವೇಶನಗಳ ಹಂಚಿಕೆ, ಉಸ್ತುವಾರಿ ಹೊಸ ಬಡಾವಣೆ ಪಾರ್ಕ್ ಹಾಗೂ ಸಿ.ಎ. ನಿವೇಶನಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ವಿವರಗಳನ್ನು ಒದಗಿಸುವುದು, ಕೆರೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದು.

**III)** ಉಪ ವಿಭಾಗದಿಂದ ಸಲ್ಲಿಸಿದ ಕಡತಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಹಾಗೂ ಉಪ ವಿಭಾಗಾಧಿಕಾರಿಗಳಿಗೆ ರಸ್ತೆ ಹಾಗೂ ಕಟ್ಟಡ ಮತ್ತು ವಸತಿ ಬಡಾವಣೆ ಕಾಮಗಾರಿ ನಿರ್ವಹಿಸಲು ನಿರ್ದೇಶನ ನೀಡುವುದು.

**IV)** ಅನ್ವಯಿಸುವುದಿಲ್ಲ.

ಗಿ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿಯಮಗಳ ಮತ್ತು ಕೆ.ಸಿ.ಎಸ್.ಆರ್. ನಿಯಮಾವಳಿಗಳಂತೆ ಕಾರ್ಯನಿರ್ವಹಿಸುವುದು.

**VI)** ಇಲಾಖೆ ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಣಾ ಪಟ್ಟಿ.

(ಅ). ಹಾಜರಾತಿ ಪುಸ್ತಕ

(ಆ). ವಿಷಯ ವಹಿಗಳು

(ಇ). ಕಛೇರಿಗೆ ಬರುವ ಕಡತಗಳ ಹಾಗೂ ಪತ್ರಗಳ ವಿಷಯ ವಹಿ

(ಈ). ರವಾನೆ ಪುಸ್ತಕ

**VII)** ಅನ್ವಯಿಸುವುದಿಲ್ಲ.

**VIII)** ಅನ್ವಯಿಸುವುದಿಲ್ಲ.

**IX)** ಕಾರ್ಯಪಾಲಕ ಅಭಿಯಂತರರು, ವಿಭಾಗ ಕಛೇರಿ, ಹಾಗು ಉಪ ವಿಭಾಗ ಕಛೇರಿಯ ಸಿಬ್ಬಂದಿ ವರ್ಗದವರ ವಿವರ ಸೂಚಿ.

| ಕ್ರಮ ಸಂ | ಹೆಸರು | ಪದನಾಮ | ಕಛೇರಿ ವಿಳಾಸ | ದೂರವಾಣಿ ಸಂಖ್ಯೆ |
|---|---|---|---|---|
| 1 | ವೀರಸಿಂಗ್ ನಾಯಕ್ | ಕಾರ್ಯಪಾಲಕ ಅಭಿಯಂತರರು | ಪೂರ್ವ ವಿಭಾಗ ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಹೆಚ್.ಎಸ್.ಆರ್. ವಾಣಿಜ್ಯ ಸಂಕೀರ್ಣ, ಬೆಂಗಳೂರು. | 080-25720264 |
| 2 | ಎಂ.ಜಿ.ಶ್ರೀನಿವಾಸಮೂರ್ತಿ | ಲೆಕ್ಕಾಧೀಕ್ಷಕರು | -ಇದೇ- | -ಇದೇ- |
| 3 | ಎಂ.ದೀನಪಾವನ | ಸಹಾಯಕ ಅಭಿಯಂತರರು-II | -ಇದೇ- | -ಇದೇ- |
| 4 | ಶಿವಣ್ಣ | ದ್ವಿತೀಯ ದರ್ಜೆ ಸಹಾಯಕರು | -ಇದೇ- | -ಇದೇ- |
| 5 | ಬಿ.ಬಿ.ಭೋರಿ | ಸ.ಕಾ.ಪಾ.ಇ-1 | ಪೂರ್ವ ಉಪ ವಿಭಾಗ, ಸಂಖ್ಯೆ-1, ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಹೆಚ್.ಎಸ್.ಆರ್. ವಾಣಿಜ್ಯ ಸಂಕೀರ್ಣ, ಬೆಂಗಳೂರು. | 080-25720264 |
| 6 | ವೀರಭದ್ರಯ್ಯ .ಸಿ., | ಸ.ಇ-1 | -ಇದೇ- | -ಇದೇ- |

| | | | | |
|---|---|---|---|---|
| 7 | ಸಿ.ಜಿ.ರಘುನಂದನ್ | ಸ.ಕಾ.ಪಾ.ಇ-2 | ಪೂರ್ವ ಉಪ ವಿಭಾಗ, ಸಂಖ್ಯೆ-2, ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಹೆಚ್.ಎಸ್.ಆರ್. ವಾಣಿಜ್ಯ ಸಂಕೀರ್ಣ, ಬೆಂಗಳೂರು. | 080-25720264 |
| 8 | ಎಸ್.ಎಸ್.ಅರವಿಂದ್ | ಸ.ಇ-1 | -ಇದೇ- | -ಇದೇ- |
| 9 | ಜಿ.ಸತೀಶ್ | ಸ.ಕಾ.ಪಾ.ಇ-3 | ಪೂರ್ವ ಉಪ ವಿಭಾಗ, ಸಂಖ್ಯೆ-3, ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಹೆಚ್.ಎಸ್.ಆರ್. ವಾಣಿಜ್ಯ ಸಂಕೀರ್ಣ, ಬೆಂಗಳೂರು. | 080-25720264 |
| 10 | ಡಿ.ಕೃಷ್ಣಾನಾಯಕ್ | ಸ.ಇ-1 | -ಇದೇ- | -ಇದೇ- |
| 11 | ಮೊಹಮ್ಮದ್ ನೇಮತ್ ಉಲ್ಲಾಖಾನ್ | ಸ.ಕಾ.ಪಾ.ಇ-4 | ಪೂರ್ವ ಉಪ ವಿಭಾಗ, ಸಂಖ್ಯೆ-3, ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಹೆಚ್.ಎಸ್.ಆರ್. ವಾಣಿಜ್ಯ ಸಂಕೀರ್ಣ, ಬೆಂಗಳೂರು. | |
| 12 | ಬಿ. ಮಲ್ಲಿಕಾರ್ಜುನ | ಸ.ಇ-1 | -ಇದೇ- | -ಇದೇ- |

**X)** ನೌಕರರ ಸಂಬಳದ ಮಾಹಿತಿ

ಮೇಲಿನ ಮಾಹಿತಿಯನ್ನು ಪ್ರಾಧಿಕಾರದ ಲೆಕ್ಕಪತ್ರ ಶಾಖೆಯವರು ನೀಡುತ್ತಾರೆ.

**XI)** ಎಲ್ಲಾ ಯೋಜನೆಗಳ ಪ್ರಸ್ತಾವಿತ ವೆಚ್ಚಗಳ ವಿವರಗಳನ್ನು ಯೋಜನೆಗಳ ಡಿ.ಪಿ.ಆರ್. ತಯಾರಿಕೆ ಹಂತದಲ್ಲಿಯೇ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ. ಏಜೆನ್ಸಿಗಳಿಗೆ ಅವರು ನಿರ್ವಹಿಸುವ ಕಾಮಗಾರಿಗಳ ಪ್ರಮಾಣಕ್ಕೆ ಅನುಮೋದಿತ ಟೆಂಡರಿನ ದರಗಳಂತೆ ಆಯವ್ಯಯ ಪತ್ರವನ್ನು ಹಾಗೂ ಬಟವಾಡೆ ವರದಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತದೆ.

**XII)** ಅನ್ವಯಿಸುವುದಿಲ್ಲ.

**XIII)** ಅನ್ವಯಿಸುವುದಿಲ್ಲ.

**XiV)** ಅನ್ವಯಿಸುವುದಿಲ್ಲ.

**XV)** ಅನ್ವಯಿಸುವುದಿಲ್ಲ.

**XVi)** ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು ಈ ಕೆಳಗಿನಂತಿವೆ.

ಅ) ಬಿ.ಬಿ.ಭೋರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ-1,

ಆ) ಸಿ.ಜಿ.ರಘುನಂದನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ-2,

ಇ) ಜಿ.ಸತೀಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ-3,

ಈ) ಮೊಹಮ್ಮದ್ ನೇಮತ್ ಉಲ್ಲಾಖಾನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಉಪ ವಿಭಾಗ ಸಂಖ್ಯೆ-4,

**XVii)** ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಸೆಕ್ಷನ್ 4(1) ಎ ನಮೂನೆಯಲ್ಲಿ ಪ್ರತಿ ಉಪ ವಿಭಾಗವಾರು ಪ್ರಕಟಿಸಿ ಪ್ರತಿ ವರ್ಷ ಅಕ್ಟೋಬರ್ ತಿಂಗಳ ಒಳಗಾಗಿ ಇನ್ನೂ ಮುಂದೆ ಸಲ್ಲಿಸಲಾಗುವುದು.

*ಒಬ್ಬರಿಗಿಂತ ಹೆಚ್ಚು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಇದ್ದುದರಿಂದ ಮಾಹಿತಿ ಕೋರಿಕೆದಾರರಿಗೆ ಗೊಂದಲವಾಗದಂತೆ ಮತ್ತು ತಮ್ಮ ಮಾಹಿತಿ ಕೋರಿಕೆಗಳನ್ನು ನಿರ್ದಿಷ್ಟ ಮತ್ತು ಸರಿಯಾದ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸಲ್ಲಿಸಲು ಅನುವು ಆಗುವಂತೆ ನಿರ್ವಹಿಸುವ ಕೆಲಸ ಕಾರ್ಯಗಳ ಸಂಪೂರ್ಣ ವಿವರಗಳನ್ನು ಸೂಚನಾ ಫಲಕಗಳಲ್ಲಿ ಹಾಗೂ ವೆಬ್ ಸೈಟ್ ಗಳಲ್ಲಿ ಹಾಕಲಾಗುತ್ತದೆ.*

*ಕಾರ್ಯಪಾಲಕ ಅಭಿಯಂತರರು,*
*ಪೂರ್ವ ವಿಭಾಗ,*
*ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,*
*ಬೆಂಗಳೂರು.*